# ದೇವರಿಗೆ ಉಪ್ಪಿನ ಹರಕೆ!

ನಾವು ಅಡುಗೆಗೆ ಉಪಯೋಗಿಸುವ ಉಪ್ಪನ್ನೇ ದೇವರಿಗೆ ಹರಕೆಗೆ ಒಪ್ಪಿಸುತ್ತಿರುವುದರ ಬಗ್ಗೆ ಎಲ್ಲಿಯಾದರೂ ಕೇಳಿದ್ದೀರಾ? ಈ ಚಿತ್ರದಲ್ಲಿರುವ ಚಿಕ್ಕ ಗುಡಿಯ ಪಕ್ಕದಲ್ಲಿಯೇ ಉಪ್ಪಿನ ಪ್ಯಾಕೆಟ್‌ಗಳ ರಾಶಿ ಬಿದ್ದಿದೆ. ಕಾರವಾರ ಪಟ್ಟಣದ ಗೀತಾಂಜಲಿ ಚಿತ್ರ ಮಂದಿರ ಬಳಿಯಿರುವ ದೃಶ್ಯವಿದು. ಭಕ್ತಾದಿಗಳು ತಮ್ಮ ಮನಸ್ಸಿನ ಬಯಕೆ ಈಡೇರಿದಾಗ ಅರ್ಪಿಸಿದ ಉಪ್ಪಿನ ಪ್ಯಾಕೆಟ್‌ಗಳು ಗುಡಿಯ ಎತ್ತರದಷ್ಟು ರಾಶಿಯಾಗಿವೆ.

**ಚಿತ್ರ-ಬರಹ: ಗಣಪತಿ ಹಾಸ್ಪುರ, ಯಲ್ಲಾಪುರ**





# ಆದಿಚುಂಚನಗಿರಿಯ ಹಳ್ಳಿಯ ಚಿತ್ರಣ

ಬೆಳ್ಳೂರು ಕ್ರಾಸಿನಿಂದ ಹೋಗಿ ಆದಿಚುಂಚನಗಿರಿ ಕಮಾನು ಪ್ರವೇಶಿಸಿ ಬೆಟ್ಟ ಹತ್ತುವುದಕ್ಕಿಂತ ಮುಂಚೆ ಎಡಕ್ಕೆ ಪುಷ್ಕರಣಿ ಕಾಣುತ್ತದೆ. ಪುಷ್ಕರಣಿ ಪಕ್ಕದಲ್ಲಿ ನೋಡಲು ನಿಜವಾದ ಜನರೇ ದನಕರು, ಕುರಿ ಮೇಯಿಸುತ್ತಿದ್ದಾರೆಂದು ಅನ್ನಿಸುತ್ತದೆ. ಹತ್ತಿರಕ್ಕೆ ಹೋಗಿ ನೋಡಿದರೆ ಗೊತ್ತಾಗುವುದು ಇವು ಸಿಮೆಂಟ್‌ನಿಂದ ಮಾಡಿರುವ ಕಲಾಕೃತಿಗಳೆಂದು. ಹಾಲು ಕರೆಯುವುದು, ಹಸು ಕರುವನ್ನು ಮುದ್ದಿಸುವುದು, ದನಕರುಗಳನ್ನು ಮೇಯಿಸಲು ಹೊರಟಿರುವುದು, ಅರಳಿಕಟ್ಟೆ ಮೇಲೆ ಕೂತು ಹರಟೆ ಹೊಡೆಯುವ ನೈಜ ಹಳ್ಳಿಯ ಚಿತ್ರಣ ಕಾಣುತ್ತದೆ. ಆದರೆ ಇಂದು ನಿರ್ವಹಣೆಯಿಲ್ಲದೇ ಇವುಗಳು ಪಾಳುಬಿದ್ದಿವೆ.

**-ಎಂ.ಎಸ್.ಧರ್ಮೇಂದ್ರ, ದೊಡ್ಡಮಗ್ಗೆ**

# ಪರಶುರಾಮರ ಗದಾತೀರ್ಥ

ಉಡುಪಿ ನಗರದಿಂದ ಕಟಪಾಡಿ ಮಾರ್ಗವಾಗಿ 11ಕಿ.ಮೀ. ದೂರದಲ್ಲಿ ಕುಂಜಾಲಗಿರಿ ಊರಿನಲ್ಲಿ ಶ್ರೀ ಪರಶುರಾಮ ದೇವಸ್ಥಾನ ಇದೆ. ದೇವಸ್ಥಾನ ಇರುವ ಶಿಲಾಬೆಟ್ಟದ ತಳ ಭಾಗದಲ್ಲಿ ವರ್ಷದ ಸದಾಕಾಲವೂ ನೀರಿರುವ ಗದಾತೀರ್ಥ ಪುಷ್ಕರಣಿ ಇದೆ. ಇದನ್ನು ಪರಶುರಾಮರು ನಿರ್ಮಾಣ ಮಾಡಿದ್ದೆಂದು ಸ್ಥಳಪುರಾಣದಿಂದ ತಿಳಿದು ಬರುತ್ತದೆ. ತೀರ್ಥದ ನೀರನ್ನು ದೇವರ ಪೂಜಾಕಾರ್ಯಕ್ಕೆ ಬಳಸಲಾಗುತ್ತದೆ.

**ಚಿತ್ರ-ಬರಹ: ತಾರಾನಾಥ್ ಮೇಸ್ತ, ಶಿರೂರು**

